ಮಲ್ಲಿಕಾರ್ಜುನ ಹುಲಗಬಾಳಿ

ಕಲೆ: ಪ್ರವೀಣ್ ಆಚಾರ್ಯ

# ಒಂದಕ್ಕಂಜುವರಯ್ಯಾ...

ಹೇಳಿಕೇಳಿ ನಮ್ಮದು ಒತ್ತಡದ ಬದುಕು. ಬಿಟ್ಟೂಬಿಡದೆ ಒಂದಾದ ಮೇಲೊಂದರಂತೆ ಬಂದೆರಗುವ ಕಾರ್ಯ–ಕಾರಣಗಳು, ನಾನಾ ರೀತಿಯ ಒತ್ತಡಗಳಿಂದಾಗಿ ಬದುಕು ಭಾರವಾಗುತ್ತಿದೆ ಎಂಬುದು ನನ್ನ ಗುಮಾನಿ. ಅಂಥ 'ಭಾರ'ಗಳಲ್ಲಿ ಒಂದಾಗಿರುವ 'ಒಂದಕ್ಕೆ' ಎಂಬ ನಿಸರ್ಗ ಕರೆಯ ಸುತ್ತ ಕೊರೆಯಬೇಕೆಂಬ ತಲುಬು ಅದುಹೇಗೊ ನನ್ನಲ್ಲಿ ಹುಟ್ಟಿಕೊಂಡಿದೆ. ವಾಚಕ ಮಹಾಶಯರ ಕ್ಷಮೆ ಇರಲಿ.

'ಛೀ!... ಛೀ!!... ಬರೀಲಿಕ್ಕೆ ನಿಮಗ ಮತ್ಯಾವ ಟಾಪಿಕ್ಕು ಸಿಗಲಿಲ್ಲವೆ, ಮಾರಾಯ್ರ? ಹೋಗಿ ಹೋಗಿ ಇಂಥಾದ್ದರ ಮ್ಯಾಲೆ!...' ಎಂದು ಮುಖಕಿವುಚಿ, ಯಾರೂ ತಮ್ಮ ಮೂಗು ಮುಚ್ಚಿಕೊಳ್ಳಬೇಕಿಲ್ಲ. ಯಾಕಂದ್ರೆ... ನಾವು ಅಮೂತ್ರರಲ್ಲ. ಜನಮದಾರಭ್ಯದಿಂದ ಬದುಕಿನ ಅಂತಿಮ ಕ್ಷಣದವರೆಗೆ ಬೆಂಬತ್ತಿ ಬರುವ 'ಒಂದು' ಮತ್ತು 'ಎರಡು' ಎಂಬ ನಿಸರ್ಗ ಕರೆಗಳು ಅನಿವಾರ್ಯದ ಅನಿಷ್ಟಗಳು ಎಂದು ಅನ್ನಬಹುದು. ಅನೇಕ ಸಲ ಈ 'ಕರೆ'ಗಳಿಂದ ಕಾರ್ಯಭಂಗ, ಮಾನಭಂಗ, ಮಾನಾಪಹರಣ, ಚಿತ್ತಕ್ಷೋಭೆಗಳಿಗೆ ನೀವು ತುತ್ತಾಗಿರಬಹುದು. ಆದರೂ ಅವುಗಳಿಲ್ಲದೆ ಬದುಕು ಇಲ್ಲ. ರಾವಣ, ಅದೆಷ್ಟೊ ವರ್ಷಗಳ ಕಾಲ ಘೋರತಪಸ್ಸು ಮಾಡಿ, ಪರಶಿವನನ್ನು ಕಾಡಿಬೇಡಿ, ಕಷ್ಟದಿಂದ ಹೊತ್ತುತಂದಿದ್ದ ಶಿವನ ಆತ್ಮಲಿಂಗವನ್ನು ಇದೇ ಮೂತ್ರಪಿಶಾಚಿಯಿಂದ ಕಳೆದುಕೊಂಡ. ಆದರೇನು, ಲಂಕಾಧಿಪತಿ ಮೂತ್ರಮುಕ್ತನಾದನೆ, ಇಲ್ಲವಲ್ಲ...

'ಒಂದಕ್ಕ ಹೋಗಿನಂದ್ರೂ ಪುರಸೊತ್ತಿಲ್ಲಂದಾಗೇತಿ ಮಾರಾಯಾ' ಅಂತಂದರೂ, ಈ ನಿಸರ್ಗ ಕರೆಯನ್ನು ನಿರ್ಲಕ್ಷ್ಯ ಮಾಡಲಾದೀತೆ? ಟ್ರಾಫಿಕ್ ಜಾಮ್ ಅಂದ್ಕೊಂಡು, ಸಂಚಾರಿ ಪೊಲೀಸಪ್ಪ ಮಿನಿಸ್ಟರ್ ಕಾರು ನಿರ್ಲಕ್ಷ್ಯ ಮಾಡಿಯಾನೆ? ಹೊತ್ತೇನು, ಗೊತ್ತೇನು ಎಂಬ ಅಳುಕಿಲ್ಲದೆ ಮೈಯೊಳಗೆ ಹೊಕ್ಕು, ಅಂತರಂಗವನ್ನು ಹುಟ್ಟಾಡಿಸಿ, ರಣರಂಗ ಮಾಡಿಬಿಡುವ ಕವಿಸಮಯದ ಹಾಗೆ 'ಕರೆಯ' ಒತ್ತಡ. 'ತಾಳಲಾರೆ, ನಾ ತಡೆಯಲಾರೆ, ತಾರಮಯ್ಯ– ಜೋರಮ್ಮಯ್ಯ' ಎಂಬ ಕಥಕ್ಕಳಿ ಆಟ, ವಿಮೋಚನೆಯಾಗುವವರೆಗೆ.

ಹಳ್ಳಿಗರು ಕುಂತು ಹೊಯ್ಯುವ ಕಾಲ್ಮಡಿಗೂ, ಜನಿವಾರ ಕಿವಿಗೆ ಅಂಟಿಸಿ ಜಲಬಾಧೆ ತೀರಿಸಿಕೊಳ್ಳುವ ಅಯ್ಯನವರ ಶೌಚಕ್ರಿಯೆಗೂ, ನಗರವಾಸಿಗಳು ನಿಂತುಕೊಂಡೆ ಅಟೆಂಡ್ ಮಾಡುವ ನ್ಯಾಚುರಲ್ ಕಾಲ್‌ಗೂ ಇರುವ ಜರೂರತ್ತು ಒಂದೆ– ಅದು 'ವಿಮೋಚನೆ'. ಎಲ್ಲೆಂದರಲ್ಲಿ, ಯಾವಾಗಂದ್ರೆ ಆವಾಗ, ನಿಂತ ಭಂಗಿಯಲ್ಲಿಯೆ 'ಏಕೀಭವಿಸುವ' ಚತುಷ್ಪಾದಿಗಳಿಗೆ – ಕಂಬ ಕಂಡಲ್ಲಿ, ಕಂಡ ಕಂಡ ಗಿಡದ ಬೊಡ್ಡೆಗೆ, ಎದ್ದು ಕಾಣುವ ಕಲ್ಲುದಿನ್ನೆಗಳ ಮೇಲೆಲ್ಲ ಹಿಂಗಾಲೆತ್ತಿ ಮೂತ್ರಪ್ರೋಕ್ಷಣೆ ಮಾಡುವ ಶುನಕ ಸಂತಾನಗಳಿಗಿರುವ ಮುಕ್ತಮೂತ್ರದ ಪರಮ ಸ್ವಾತಂತ್ರ್ಯ ಕಂಡು ಬಹಳ ಸಲ ಕರುಬಿದವರುಂಟು. 'ಹೇಸಿ ಈ ನರಜನ್ಮ ನಾಯಿಯಾಗಿ ಹುಟ್ಟಬಾರದಿತ್ತೆ?' ಎಂದು ಹಳಹಳಿಸಿದವರೂ ಇದ್ದಾರು.

ಮಗುವಾಗಿದ್ದಾಗ ಅರಿವಿಗೆ ಬಾರದೆ, ಸ್ಸು... ಸ್ಸೂ ಮಾಡಿಕೊಂಡು ಹಾಸಿಗೆ ಹಸಿ ಮಾಡಿಕೊಂಡಾದ ಮೇಲೆ, ಶಾಲಾ ಮಾಸ್ತರರ ಬೆತ್ತದೇಟಿಗೆ ಚೊಣ್ಣ ಒದ್ದೆ ಮಾಡಿಕೊಂಡೇ

